



ದಿನಾಂಕ: 20-09-23 ರಂದು ಹುಬ್ಬಳ್ಳಿ ಬಳಿ ಇರುವ "ವರೂರ್" ಗ್ರಾಮದಲ್ಲಿರುವ ನವಗ್ರಹ ತೀರ್ಥದ ಪೀಠಾಧಿಪತಿಗಳಾದ ಪರಮಪೂಜ್ಯ ರಾಷ್ಟ್ರಸಂತ ಆಚಾರ್ಯ ಶ್ರೀ ಗುಣಧರನಂದಿ ಮಹಾರಾಜರ ಸ್ವರ್ಣ ಜನ್ಮ ಜಯಂತಿ ಮಹೋತ್ಸವ ಕಾರ್ಯಕ್ರಮದಲ್ಲಿ ಗೌರವಾನ್ವಿತ ರಾಜ್ಯಪಾಲರಾದ ಶ್ರೀ ಥಾವರ್‌ಚಂದ್ ಗೆಹ್ಲೋಟ್, ಮಾನ್ಯ ಸಭಾಪತಿ ಶ್ರೀ ಬಸವರಾಜ ಎಸ್.ಹೊರಟ್ಟಿ ರವರು ಭಾಗವಹಿಸಿ ಕಳೆದ 15 ವರ್ಷಗಳ ಹಿಂದೆ ಇಲ್ಲಿ ಬಂದು ಶಿಕ್ಷಣ ಸಂಸ್ಥೆಗಳನ್ನು ಮಾಡಿ ಯಾವ ಸರ್ಕಾರವೂ ಮಾಡದ ಕೆಲಸವನ್ನು ಶ್ರೀಗಳು ಮಾಡಿದ್ದಾರೆ. ಇಂತಹ ಸ್ವಾಮೀಜಿಗಳು ಇದ್ದಲ್ಲಿ ಸಮಾಜ ಸುಭಿಕ್ಷೆಯಿಂದ ಇರಲು ಸಾಧ್ಯ. ಶ್ರೀಗಳಿಗೆ ಭಗವಂತ ಆರೋಗ್ಯ ನೀಡಲಿ ಅವರಿಂದ ಇನ್ನಷ್ಟು ಸಾಮಾಜಿಕ ಕಾರ್ಯಗಳಾಗಲಿ ಎಂದು ಮಾತನಾಡಿದರು. ಈ ಸಂದರ್ಭದಲ್ಲಿ ಗುಣಧರನಂದಿ ಸ್ವಾಮೀಜಿ ಜೀವನ ಚರಿತ್ರೆಯನ್ನೊಳಗೊಂಡ ರಾಷ್ಟ್ರಸಂತ ಪುಸ್ತಕವನ್ನು ಲೋಕಾರ್ಪಣೆ ಮಾಡಿದರು.





ಶ್ರೀ ಗುಣಧರನಂದಿ ಮಹಾರಾಜರ ಸ್ವರ್ಣ ಜನ್ಮ ಜಯಂತಿ ಮಹೋತ್ಸವ ಕಾರ್ಯಕ್ರಮದ ನಂತರ ಛಬ್ಬಿ ಕ್ರಾಸ್ ಬಳಿ ಇರುವ ಮಾನ್ಯ ಸಭಾಪತಿ ಬಸವರಾಜ್ ಹೊರಟ್ಟಿ ಅವರು ತಮ್ಮ ನಿಸರ್ಗ ಫಾರ್ಮಿಗೆ ಗೌರವಾನ್ವಿತ ರಾಜ್ಯಪಾಲರನ್ನು ಅತ್ಯಂತ ಪ್ರೀತಿಯಿಂದ ಗೌರವ ಪೂರ್ವಕವಾಗಿ ತಮ್ಮ ತೋಟಕ್ಕೆ ಬರಮಾಡಿಕೊಂಡು ನಿಸರ್ಗ ಫಾರ್ಮ ನಲ್ಲಿರುವ ಎಲ್ಲ ವಿವಿಧ ಜಾತಿಯ ಮರಗಳ ಕುರಿತು ಪ್ರಾಣಿಗಳ ಬಗ್ಗೆ ಬೆಳೆಯುವ ಬೆಳೆಗಳ ಕುರಿತು ಹಾಗೂ ತೋಟದ ಎಲ್ಲಾ ಕೃಷಿ ಚಟುವಟಿಕೆಗಳ ಬಗ್ಗೆ ರಾಜ್ಯಪಾಲರಿಗೆ ಸಮಗ್ರ ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ರಾಜ್ಯಪಾಲರು, ಹೊರಟ್ಟಿ ಅವರು ಎಷ್ಟೇ ಎತ್ತರಕ್ಕೆ ಬೆಳೆದರೂ ತಮ್ಮ ಕೃಷಿ ಪ್ರೇಮವನ್ನು ಎಂದಿಗೂ ಬಿಟ್ಟು ಕೊಟ್ಟಿಲ್ಲ ಎನ್ನುವುದಕ್ಕೆ ಸುಂದರವಾದ, ಸ್ವಚ್ಛ, ವಿಶಾಲವಾದ ನಿಸರ್ಗ ಫಾರ್ಮ್ ಸಾಕ್ಷಿ. ಕಳೆದ ಎರಡು ತಿಂಗಳ ಹಿಂದೆ ಬೆಂಗಳೂರಿನಲ್ಲಿ ಅವರ ಮಾತೋಶ್ರೀ ಗುರವ್ವ ನವರ ಸ್ಮರಣಾರ್ಥ ಹೊರಟ್ಟಿಯವರ ನೇತೃತ್ವದ ಅವ್ವ ಸೇವಾ ಟ್ರಸ್ಟ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರ ಮಾತೃಪ್ರೇಮ ಸಮಾಜಮುಖಿ ಚಟುವಟಿಕೆಗಳನ್ನು ಸಹ ವೀಕ್ಷಿಸಿ ಖುಷಿ ಪಟ್ಟಿದ್ದೆ. ಈಗ ಅವರ ತೋಟವನ್ನು ಸಹ ನೋಡಿ ಸಾಕಷ್ಟು ಆನಂದಪಟ್ಟಿದ್ದೇನೆ ಕಳೆದ ನಾಲ್ಕು ದಶಗಳಿಂದ ಎಲ್ಲ ಸಮುದಾಯ ಎಲ್ಲ ಕ್ಷೇತ್ರದಲ್ಲೂ ತಮ್ಮದೇ ಆದ ಹೆಜ್ಜೆ ಗುರುತುಗಳನ್ನು ಮೂಡಿಸುವ ಮೂಲಕ ಒಬ್ಬ ಮಾದರಿ ಜನಪ್ರತಿನಿಧಿಯಾಗಿ ಹೊರಟ್ಟಿಯವರು ನಮ್ಮ ಮಧ್ಯೆ ಇದ್ದಿದ್ದು ನಮಗೆಲ್ಲ ಹೆಮ್ಮೆ ಅವರ ಸೇವೆ ಇನ್ನಷ್ಟು ಸಮಾಜಕ್ಕೆ ಕೃಷಿ ಕ್ಷೇತ್ರಕ್ಕೆ ದೊರೆಯಲಿ ಎಂದು ಆಶಿಸಿ ಹೊರಟ್ಟಿ ಅವರಿಗೆ ಅಭಿನಂದನೆಗಳನ್ನು ಸಲ್ಲಿಸಿದರು.